
ಎಸ್‌ಸಿ/ಎಸ್‌ಟಿ ನೇಮಕ ಮೀಸಲು ಕುರಿತು ಸುಪ್ರೀಂ ಕೋರ್ಟ್ ತೀರ್ಪು I ಹೊರನಡೆದ ಪ್ರತಿಪಕ್ಷಗಳು

# ಸಂಸತ್: ಬಡ್ತಿ ಮೀಸಲು ಕೋಲಾಹಲ

11/2/2020

ದೆಹಲಿ: ಪರಿಶಿಷ್ಟಜಾತಿ/ವರ್ಗಗಳ ಉದ್ಯೋಗಿಗಳ ಬಡ್ತಿ ಮೀಸಲು ಸಂಬಂಧ ಸೋಮವಾರ ಅಧಿವೇಶನದಲ್ಲಿ ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಆಡಳಿತ ಪಕ್ಷವನ್ನು ತೀವ್ರ ತರಾಟೆಗೆ ತೆಗೆದುಕೊಂಡವು.



## ಬಿಜೆಪಿ ಸರಕಾರದ ಕ್ರಮ ಮನುವಾದ ಎಂದ ಕಾಂಗ್ರೆಸ್

ದೆಹಲಿ: ಪರಿಶಿಷ್ಟಜಾತಿ/ವರ್ಗಗಳ ಉದ್ಯೋಗಿಗಳ ಬಡ್ತಿ ಮೀಸಲು ಸಂಬಂಧ ಸುಪ್ರೀಂ ಕೋರ್ಟ್ ನಿರ್ಧಾರದ ವಿರುದ್ಧ ಸೋಮವಾರ ಲೋಕಸಭೆಯಲ್ಲಿ ತೀವ್ರ ವಿರೋಧ ವ್ಯಕ್ತವಾಯಿತು. ಬಿಜೆಪಿ ಸರಕಾರದ ಕ್ರಮವನ್ನು ಮನುವಾದ ಎಂದು ಕಾಂಗ್ರೆಸ್ ಅಸಮಾಧಾನ ವ್ಯಕ್ತಪಡಿಸಿದೆ.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷ ನಾಯಕ ಅಧೀರ್ ರಂಜನ್ ಚೌಧರಿ, ಬಿಜೆಪಿ ನೇತೃತ್ವದ ಉತ್ತರಾಖಂಡ ರಾಜ್ಯ ಸರಕಾರ ಕೈಗೊಂಡ ಕ್ರಮದ ಮೂಲಕ ತಮ್ಮದು 'ರಾಷ್ಟ್ರವಾದ' ಅಲ್ಲ 'ಮನುವಾದ' ಎಂಬುದನ್ನು ತೋರಿಸಿಕೊಟ್ಟಿದೆ ಎಂದು ದೂರಿದರು. ಪರಿಶಿಷ್ಟಜಾತಿ/ವರ್ಗಗಳ ಉದ್ಯೋಗಿಗಳಿಗೆ ಬಡ್ತಿಯಲ್ಲಿ ಮೀಸಲು ಕಲ್ಪಿಸುವುದು ರಾಜ್ಯ ಸರಕಾರದ ಸಂವಿಧಾನಾತ್ಮಕ ಹೊಣೆಗಾರಿಕೆಯಲ್ಲ ಎಂದು ಸುಪ್ರೀಂ ಕೋರ್ಟ್ ಮುಂದೆ ಉತ್ತರಾಖಂಡ ರಾಜ್ಯ ಸರಕಾರ ಸ್ಪಷ್ಟಪಡಿಸಿದೆ ಎಂದು ದೂರಿದರು. ಅಧೀರ್ ರಂಜನ್ ಚೌಧರಿ ಹೇಳಿಕೆಯನ್ನು ದಾಖಲೆಯಿಂದ ತೆಗೆಸಬೇಕು ಎಂದು ಒತ್ತಾಯಿಸಿದ ಸಚಿವ ಜೋಶಿ, ಅವರ ಹೇಳಿಕೆ ಸರಕಾರದ ವಿರುದ್ಧವಾಗಿದೆ. ಹಾಗಾಗಿ ಹೇಳಿಕೆ ಕಡತದಿಂದ ತೆಗೆಸಬೇಕು ಒತ್ತಾಯಿಸಿದರು.

ಸುಪ್ರೀಂ ಕೋರ್ಟ್ ಸೋಮವಾರ ಬೆಳಗ್ಗೆ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಮೇಲಿನ ದೌರ್ಜನ್ಯ ತಡೆ ತಿದ್ದುಪಡಿ ಕಾಯಿದೆ 2018 ಅನ್ನು ಎತ್ತಿಹಿಡಿದಿದೆ.

ಈ ಸಮಯದಲ್ಲಿ ಮಧ್ಯಪ್ರವೇಶಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಮಾಜ ಕಲ್ಯಾಣ ಸಚಿವರು ಈ ಸಂಬಂಧ ಹೇಳಿಕೆ ನೀಡುತ್ತಾರೆ. ಅಲ್ಲಿಯವರೆಗೂ ಕಾಯಬೇಕು. ಕಾಂಗ್ರೆಸ್ ಈ ವಿಷಯವನ್ನು ರಾಜಕೀಯಗೊಳಿಸುತ್ತಿದೆ ಎಂದು ಆರೋಪಿಸಿದರು. ನಂತರ ಮಾತನಾಡಿದ ಕೇಂದ್ರ ಸಮಾಜ ಕಲ್ಯಾಣ ಸಚಿವ ತವಾರ್ ಚಂದ್ ಗೆಹ್ಲೋಟ್, ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಉದ್ಯೋಗ ಮತ್ತು ಬಡ್ತಿಯಲ್ಲಿ ಮೀಸಲು ನೀಡುವುದು ರಾಜ್ಯ ಸರಕಾರಗಳ ವಿವೇಚನೆಗೆ ಬಿಟ್ಟ ವಿಚಾರ. ಸರಕಾರಿ ಉದ್ಯೋಗದಲ್ಲಿ ಮೀಸಲು ಬೇಕೇಬೇಕು ಎಂದು ಕೇಳುವುದಕ್ಕೆ ಅದು ಯಾವುದೇ ಮೂಲಭೂತ ಹಕ್ಕಲ್ಲ ಎಂಬ ಸುಪ್ರೀಂ ಕೋರ್ಟ್ ತೀರ್ಪಿಗೂ ಕೇಂದ್ರ ಸರಕಾರಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟನೆ ನೀಡಿದರು.

ಕೇಂದ್ರ ಸರಕಾರ ಈ ಪ್ರಕರಣದಲ್ಲಿ ಎಂದಿಗೂ ಪಕ್ಷವಾಗಿ ಮಾಡಿಲ್ಲ. ಯಾವುದೇ ಘೋಷಣೆಯನ್ನು ಮಂಡಿಸಲು ನಮ್ಮನ್ನು ಕೇಳಿಲ್ಲ. 2012ರಲ್ಲಿ ಉತ್ತರಾಖಂಡ ಸರಕಾರ ತೆಗೆದುಕೊಂಡ ನಿರ್ಧಾರದಿಂದಾಗಿ ಈ ವಿಷಯ ಉದ್ಭವಿಸಿದೆ. ಆ ಸಮಯದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಇತ್ತು ಎಂದು ಗೆಹ್ಲೋಟ್ ಹೇಳಿದರು.

ನಮ್ಮ ಸರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣಕ್ಕೆ ಬದ್ಧವಾಗಿದೆ. ನಾವು ಉನ್ನತ ಮಟ್ಟದ ಚರ್ಚೆಯನ್ನು ನಡೆಸುತ್ತೇವೆ ಮತ್ತು ಭವಿಷ್ಯದ ಕ್ರಮವನ್ನು ನಿರ್ಧರಿಸುತ್ತೇವೆ ಎಂದು ಅವರು ಹೇಳಿದರು. ಪ್ರತಿಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗುತ್ತಾ, ಗೆಹ್ಲೋಟ್ ಅವರ ಹೇಳಿಕೆಯ ವಿರುದ್ಧ ಸಂಸತ್‌ನಿಂದ ಹೊರನಡೆದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ.ಹಕ್ಕುಗಳನ್ನು ಕಸಿದುಕೊಳ್ಳಲು ಸರಕಾರ ಪ್ರಯತ್ನಿಸುತ್ತಿದೆ ಎಂದು ಕಾಂಗ್ರೆಸ್ ಈ ಹಿಂದೆ ಆರೋಪಿಸಿತ್ತು.



"ಇಂತಹ ಸೂಕ್ಷ್ಮ ವಿಷಯವನ್ನು ರಾಜಕೀಯ ಗೊಳಿಸಲು ಕಾಂಗ್ರೆಸ್ ಪ್ರಯತ್ನಿಸು ತ್ತಿದೆ. ಇದು ಗಂಭೀರ ವಿಷಯವಾಗಿದೆ.

**-ರಾಜನಾಥ್ ಸಿಂಗ್** ರಕ್ಷಣಾ ಸಚಿವ



"ಈ ಸರಕಾರ ಬಂದಾಗಿನಿಂದ ಮೀಸಲು ಮೂಲೆ ಗುಂಪಾಗಿದೆ. ಸರಕಾರ ಪರಿಶೀಲನಾ ಅರ್ಜಿ ಸಲ್ಲಿಸಬೇಕು ಅಥವಾ ಸಂವಿಧಾನದ ಒಂಬತ್ತನೇ ವೇಳಾಪಟ್ಟಿಯಲ್ಲಿ ಈ ವಿಷಯವನ್ನು ತರಬೇಕು.

**-ಎ.ರಾಜಾ** ಡಿಎಂಕೆ ಸದಸ್ಯ



"ಪ್ರಕರಣದಲ್ಲಿ ಉತ್ತರಾಖಂಡ ಬಿಜೆಪಿ ರಾಜ್ಯ ಸರಕಾರದ ಪಾತ್ರವಿಲ್ಲ. ಈ ಹಿಂದಿನ ರಾಜ್ಯ ಸರಕಾರದ ನಿರ್ಧಾರದ ವಿರುದ್ಧ 2012ರಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿತ್ತು... ಆಗ ಅಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿತ್ತು.

**-ಪ್ರಹ್ಲಾದ ಜೋಶಿ** ಸಂಸದೀಯ ವ್ಯವಹಾರಗಳ ಸಚಿವ

## ಬಿಜೆಪಿ, ಆರೆಸ್ಸೆಸ್ ಮೀಸಲು ವಿರೋಧಿ

ದೆಹಲಿ: ಬಿಜೆಪಿ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘಟನೆ ಮೀಸಲು ವ್ಯವಸ್ಥೆಗೆ ವಿರುದ್ಧವಾಗಿವೆ



ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಹೇಳಿದ್ದಾರೆ. ದಲಿತರ ಪ್ರಗತಿ, ಶ್ರೇಯೋಭಿವೃದ್ಧಿಯನ್ನು ಅವರು ಎಂದೂ ಬಯಸುವುದಿಲ್ಲ. ವ್ಯವಸ್ಥೆಯನ್ನು ಹಾಳುಗೆಡವಲು ಇವು ಸದಾ ಆಲೋಚಿಸುತ್ತಿವೆ. ಎಸ್ಸಿ ಮತ್ತು ಎಸ್ಟಿ ದೌರ್ಜನ್ಯ ತಡೆ ಕಾಯಿದೆಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದು ತೀರ್ಪು ನೀಡಿದ ಹಿನ್ನೆಲೆಯಲ್ಲಿ ರಾಹುಲ್ ಈ ಹೇಳಿಕೆ ನೀಡಿದ್ದಾರೆ.